**ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

**ಸಿ.ಸಿ ಸಂಖ್ಯೆ.*ನಂ.1137/2022***

**ಫಿರ್ಯಾಧಿದಾರಃ** ಸರಕಾರದ ಪರವಾಗಿ ಕುಂಚಾವರಂ ಪೋಲಿಸ ಠಾಣೆ

// ವಿರುದ್ದ //

**ಆರೋಪಿತರು :** 1. ಪ್ರೇಮ ಮತ್ತು ಇತರರು

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕೆಂಡ ಆರೋಪಿತರು.

| | |
|---|---|
| 1 | ಪ್ರೇಮ ತಂದೆ ರಾಮಜೀ |
| 2. | ತೇಜು ತಂದೆ ರಾಮಜೀ |
| 3. | ಅಶೋಕ ತಂದೆ ಕಿಶನ ಚವಹಾಣ |
| 4. | ದೇವಜಿ ತಂದೆ ಗೋಬ್ರು. |

**ಆದ ನಿಮ್ಮ ವಿರುದ್ದ ದೋಷಿಸುವ ಆರೋಪಣೆ ಎನೆಂದರೆ,**

ದಿನಾಂಕಃ 29-08-2022 ರಂದು ಬೆಳಿಗ್ಗೆ 11-00 ಗಂಟೆಯ ಸುಮಾರಿಗೆ ಕುಂಚಾವರಂ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಶಾದಿಪೂರ ಸೀಮಾಂತರದ ಹೊಲ ಸರ್ವೆ ನಂಬರ 108/86 ನೇದ್ದರಲ್ಲಿ ಚಾಸಾ-1 ರಾಜು ನೇದ್ದವರು ತಮ್ಮ ಹೊಲದಲ್ಲಿ ಜೆಸಿಬಿ ಯಿಂದ ಹೊಲ ಸಾಪ ಮಾಡುವಾಗ ಆರೋಪಿತರು ನೀವು ಅತಿಕ್ರಮ ಪ್ರವೇಶ ಮಾಡಿದ ಕಾರಣ, ಈ ಮೂಲಕ

ಭಾ.ದಂ.ಸಂ.ಕಲಂ. 447 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರು ನೀವು ಚಾಸಾ-5 ಶ್ಯಾಮು ನೇದ್ದವರಿಗೆ ಹೊಲದಲ್ಲಿ ಜೆಸಿಬಿ ಚಲಾಯಿಸದಂತೆ ತಡೆದು ನಿಲ್ಲಿಸಿ, ಚಾಸಾ-1 ನೇದ್ದವರ ಎದೆಯ ಮೇಲಿನ ಅಂಗಿ ಹಿಡಿದು ತಡೆದು ನಿಲ್ಲಿಸಿದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-1 ನೇದ್ದವರಿಗೆ ಬೋಸಡಿ ಮಗನೇ ರಂಡಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಕೈ ಮುಷ್ಠಿ ಮಾಡಿ ಹೊಡೆದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2 ರಿಂದ 4ನೇ ಆರೋಪಿತರು ನೀವು ಚಾಸಾ-1 ನೇದ್ದವರಿಗೆ ಈ ರಂಡಿ ಮಗನಂದು ಬಹಳ ಆಗ್ಯಾದ ಅವತ್ತು ಖಲಾಸ ಮಾಡಿ ಬಿಡೋಣ ಏನಾಗದು ಒಂದೇ ಸಲ ಆಗತ್ತದ ಅಂತಾ ಜೀವದ ಬೆದರಿಕೆ ಹಾಕಿದ ಕಾರಣ ಆ ಮೂಲಕ

ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 27.09.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.